**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ.ನಂಃ 15/2022** **ಸಿ.ಡಬ್ಲ್ಯೂ–01 ಪಿ.ಡಬ್ಲ್ಯೂ-05**

| | | |
|---|---|---|
| ಹೆಸರು | ಃ | ಸಾಧೀಕ್ |
| ತಂದೆಃ ಗಂಡ | ಃ | ಅಹ್ಮಮದ ಪಟೇಲ್ |
| ವಯಸ್ಸು | ಃ | 58 ವರ್ಷ |
| ಉದ್ಯೋಗ | : | ಏನು ಇಲ್ಲಾ |
| ವಾಸಸ್ಥಳ | ಃ | ರುದ್ರವಾಡಿ |

**ದಿನಾಂಕಃ17.07.2025**
**ಸತ್ಯ ಪ್ರತಿಜ್ಞೆಯ ಮೇರೆಗೆ**

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿಯ ಪರಿಚಯ ಇರುತ್ತದೆ. ಚಾಸಾ 2 ರಿಂದ 10 ರವರ ಪರಿಚಯ ಇರುತ್ತದೆ. ಮೃತ ಸಲ್ಮಾನ ನನ್ನ ಮಗ ಆಗಬೇಕು. ಅಪಘಾತ ಆದ ಕಾರಣ ನನ್ನ ಮಗ ತಿರಿಕೊಂಡಿದ್ದು ಪೋಸ್ಟ ಮಾಟಂಮ ಮಾಡಿದ ನಂತರ ಪೋಲಿಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 5 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ. 5 ಎ ಎಂದು ಗುರುತಿಸಲಾಯತು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಡ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿಃ 26-10-2021 ರಂದು ಬೆಳಿಗ್ಗೆ 10.00 ಗಂಟೆಗೆ ನನ್ನ ಮಗ ಸಲ್ಮಾನ ಇತನು ಅವನ ಗೆಳೆಯನಾದ ಆರೋಪಿ ಜಾಕೀರ ಜೊತೆಗೆ ಟ್ಯಾಕ್ಟರ ನಂಬರ ಕೆಎ-32/ಟಿಬಿ-6008 ರ ಚಾಸಾ-6 ರವರ ಜಮೀನಿಗೆ ಕಡಲೆ ಬಿತ್ತುವ ಸಲುವಾಗಿ ಹೋಗಿರುತ್ತಾರೆ ಎಂದರೆ ಸರಿ. ಬಿತ್ತಣಿಕೆ ಆದ ನಂತರ ಕಡಲೆ ದಿಂಡನ್ನು ಟ್ಯಾಕ್ಟರನಲ್ಲಿ ಹಾಕಿಕೊಂಡು ಅದರ ಮೇಲೆ ಸಲ್ಮಾನನ್ನು ಕೂಡಿಸಿಕೊಂಡು ಆರೋಪಿಯು ಟ್ಯಾಕ್ಟರದಲ್ಲಿ ಅಡ್ಡಾತಿಡ್ಡಿಯಾಗಿ ಅತೀ ವೇಗವಾಗಿ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಅಪಘಾತಪಡಿಸಿದ ಕಾರಣ ಸಲ್ಮಾನ ಇತನು ಟ್ಯಾಕ್ಟರ ಮೇಲಿನಿಂದ ಬಿದಿದ್ದು ಸದರಿ ವಿಷಯವನ್ನು ನಾನು ನಮ್ಮ ಊರಿನ ಸುಲೇನ ಭಾಷಾ ದರ್ಗಾದಲ್ಲಿ ಸುಮಾರು ಸಾಯಂಕಾಲ 7.30 ಗಂಟೆಗೆ ಕುಳಿತಾಗ ಚಾಸಾ 6 ರವರು ಬಂದು ತಿಳಿಸಿರುತ್ತಾರೆ ಎಂದರೆ ಸರಿ. ಸದರಿ ಅಪಘಾತವು ಹುಸೇನಭಾಷ ದರ್ಗಾದ ಹತ್ತಿರ ಕಚ್ಚಾ ರಸ್ತೆಯ ಮೇಲೆ ಆಗಿರುತ್ತದೆ ಅಂತಾ ತಿಳಿಸಿರುತ್ತಾರೆ ಎಂದರೆ ಸರಿ. ನಂತರ ವಿಷಯ ತಿಳಿದು

ನಾನು, ಚಾಸಾ-8 ಮತ್ತು 9 ರವರು ಸೇರಿಕೊಂಡು ಘಟನಾ ಸ್ಥಳಕ್ಕೆ ಹೋಗಿರುತ್ತೇವೆ ಎಂದರೆ ಸರಿ. ನಾವು ಸ್ಥಳಕ್ಕೆ ಹೋಗಿ ನೋಡಿದಾಗ ನನ್ನ ಮಗ ತೆಗ್ಗಿನಲ್ಲಿ ಮಗ್ಗಲಾಗಿ ಬಿದಿದ್ದನು ಎಂದರೆ ಸಾಕ್ಷಿಯು ನಾವು ಹೋದಾಗ ಅವನನ್ನು ಗಾಡಿಯಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದು ನುಡಿಯುತ್ತಾರೆ. ಅಪಘಾತದ ಕಾರಣದಿಂದಾಗಿ ನನ್ನ ಮಗನಿಗೆ ಎದೆಗೆ, ಹೊಟ್ಟೆಗೆ ಮತ್ತು ಬಾರಿ ಒಳಪೆಟ್ಟು ಆಗಿತ್ತು ಎಂದರೆ ಸರಿ. ಅಪಘಾತಪಡಿಸಿದ ಆರೋಪಿಯು ಸಹ ಅಲ್ಲಿಯೇ ಇದ್ದರು ಎಂದರೆ ಸರಿ, ನಂತರ ಒಂದು ಖಾಸಗಿ ವಾಹನದಲ್ಲಿ ನನ್ನ ಮಗನನ್ನು ಉಮರ್ಗಾದ ಡಾಃ ವಿಜಯ ಪಾಟೀಲ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ವೈದ್ಯರು ನನ್ನ ಮಗ ಮೃತ ಪಟ್ಟಿರುತ್ತಾರೆ ಅಂತಾ ವಿಷಯ ತಿಳಿಸಿದ ಮೇರೆಗೆ ರಾತ್ರಿ 11.30 ಗಂಟೆ ಸುಮಾರಿಗೆ ಆಳಂದ ಸರ್ಕಾರಿ ಆಸ್ಪತ್ರೆಗೆ ಮೃತ ದೇಹವನ್ನು ತೆಗೆದುಕೊಂಡು ಬಂದಿರುತ್ತೇವೆ ಎಂದರೆ ಸರಿ. ಸರ್ಕಾರಿ ಆಸ್ಪತ್ರೆ ಆಳಂದದಲ್ಲಿ ಪೋಲಿಸರು ನನ್ನ ಮಗನ ಶವಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲೀಗೆ ಸಮಯಾವಕಾಶ ಕೋರಿದದ್ದರಿಂದ ರೂ. 500/- ದಂಡದ ಮೇಲೆ ಸಮಯ ನೀಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ